VIJAYAKUMAR KANNUR
Digitally signed by VIJAYAKUMAR KANNUR
Date: 2025.09.06 17:41:52 +0530



**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 06.09.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಜಿ ಎಸ್ ಪಿ ವಕೀಲರಿಂದ :**

ನನ್ನ ಸ್ವಂತ ಊರು ಕೆ ಡಿ ಬುದ್ನಿ ಗ್ರಾಮ. ಮುಧೋಳ ಹೆಚ್ಚುವರಿ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯದಲ್ಲಿ ನನ್ನ ತಂದೆ ದಾವೆ ದಾಖಲು ಮಾಡಿದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಆ ದಾವೆಯಲ್ಲಿ ನಾನು ಸಾಕ್ಷಿ ನುಡಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯ ಅಧಿಕಾರ ಪತ್ರ ಬರೆದುಕೊಟ್ಟ ಬಗ್ಗೆ ನಾನು ಸಾಕ್ಷಿ ನುಡಿದ್ದೇನೆ ಎಂದರೆ ಸರಿಯಲ್ಲ.

2. ನಮ್ಮ ಕುಟುಂಬದ ಹೆಸರಿನಲ್ಲಿ ಬುದ್ನಿ ಕೆ ಡಿ ಗ್ರಾಮದಲ್ಲಿ ಆಸ್ತಿಗಳು ಇರುವುದಿಲ್ಲ. ಮೂಲತಃ ನಮ್ಮ ಸ್ವಂತ ಊರು ಬಂಟ್ನೂರು ಗ್ರಾಮ. ಈಗ ಛತ್ರಬಾನ ಕೋಟೆ ಗ್ರಾಮದಲ್ಲಿ ವಾಸವಾಗಿದ್ದೇವೆ ಎಂದರೆ ಸರಿಯಲ್ಲ, ಕೆ ಡಿ ಬುದ್ನಿ ಗ್ರಾಮದಲ್ಲಿ ವಾಸಿಸುತ್ತಿರುವುದಾಗಿ ಎಂದು ಸಾಕ್ಷಿ ಉತ್ತರಿಸುವರು. ಛತ್ರಬಾನ ಕೋಟೆ ಗ್ರಾಮದಲ್ಲಿ ನಮ್ಮ ಯಾವುದೇ ಸಂಬಂಧಿಗಳು ಇರುವುದಿಲ್ಲ. ಅದೇ ರೀತಿ ಬಂಟ್ನೂರು ಗ್ರಾಮದಲ್ಲಿ ಸಂಬಂಧಿಗಳು ಇದ್ದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಾನು ಮುಧೋಳದ ಹೆಚ್ಚುವರಿ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯದಲ್ಲಿನ ದಾವೆಯಲ್ಲಿ ಶ್ರೀ ಎ ಎಸ್ ಯಾದವಾಡ ವಕೀಲರ ಮೂಲಕ ನನ್ನ ಮುಖ್ಯ ಪ್ರಮಾಣ ಪತ್ರ ತಯಾರಿಸಿ ಸಲ್ಲಿಸಿದ್ದು ಅದರಲ್ಲಿ ನನ್ನ ಸ್ವಂತ ಊರು ಛತ್ರಬಾನ ಕೋಟೆ ಅಂತ ಹೇಳಿ ಬರೆಸಿದ್ದೇನೆ ಎಂದರೆ ಸರಿಯಲ್ಲ.

3. ಈ ದಾವೆ ಯಾರು ದಾಖಲು ಮಾಡಿರುವರು ಎಂದು ನನಗೆ ಗೊತ್ತಿರುವುದಿಲ್ಲ. ವಾದಿಯರ ಬಗ್ಗೆ ನನಗೆ ಪರಿಚಯ ಇರುವುದಿಲ್ಲ. ನನಗೆ ಈಗ 50 ವರ್ಷಗಳು ಆಗಿರುವವು. ನಾನು 1975 ರಲ್ಲಿ ಜನ್ಮ ತಾಳಿರುವೆನು. ನನ್ನ ಜನ್ಮ ಸ್ಥಳ ಬುದ್ನಿ ಕೆ ಡಿ ಗ್ರಾಮ. ನನ್ನ ತಂದೆಗೆ ಇಬ್ಬರು ಸಹೋದರರು. ಇವರೂ ಸಹ ಬುದ್ನ ಕೆ ಡಿ ಗ್ರಾಮದಲ್ಲಿ ವಾಸವಾಗಿದ್ದರು. ಇವರು ಸಹ ಈಗ

ಮೃತ ಪಟ್ಟಿರುವರು. ಇವರ ಹೆಸರಿನಲ್ಲಿ ಯಾವುದೇ ಆಸ್ತಿಗಳು ಇರುವುದಿಲ್ಲ. ನನಗೆ 18 ವರ್ಷದ ನಂತರ ತಿಳುವಳಿಕೆ ಬಂದಿರುವುದು. ಮೃತ ಪ್ರತಿವಾದಿ 1 ರವರು ವಾದಿ 4 ರವರ ಜೊತೆ ವಿವಾಹ ಮಾಡಿಕೊಂಡಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿ 1 ರವರು ಪ್ರತಿವಾದಿ 2 ರವರ ಜೊತೆ ವಿವಾಹ ಮಾಡಿಕೊಂಡಿರುವುದಾಗಿ ಎಂದು ನಮ್ಮ ತಂದೆ ನಮಗೆ ಹೇಳುತ್ತಿರುವುದರಿಂದ ಗೊತ್ತಿರುವುದು. ನನ್ನ ತಂದೆ ಮೃತ ಪಟ್ಟು ಈಗ 4 ವರ್ಷಗಳು ಆಗಿರಬಹುದು. ಇವರ ಮರಣ ಪ್ರಮಾಣ ಪತ್ರ ನಾನು ಪಡೆದಿರುವುದಿಲ್ಲ. ಈ ಸಂಗತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ವಾದಿ 4 ರವರು ಮೃತ ಪ್ರತಿವಾದಿ 1 ಎಿನ ಜೊತೆ ವಿವಾಹ ಮಾಡಿಕೊಂಡ ನಂತರ ವಾದಿ 1 ಹಾಗೂ ಮೃತ ಹೊಳೆಯಪ್ಪ ಬುದ್ನಿ ಕೆ ಡಿ ಗ್ರಾಮದಲ್ಲಿ ಜನ್ಮ ತಾಳಿರುವರು ಮತ್ತು ಶಾಲೆ ಕಲಿತಿರುವರು ಎಂದರೆ ಸರಿಯಲ್ಲ. ಪ್ರತಿವಾದಿ 1 ಎಿನ ಮಗಳು ಪ್ರತಿವಾದಿ 3 ರವರು ಮಾತ್ರ. ವಾದಿ 4 ಮತ್ತು ಪ್ರತಿವಾದಿ 1 ರವರು ಮದುವೆಯಾದ ಬಗ್ಗೆ ನನಗೆ ಗೊತ್ತಿರುವುದಿಲ್ಲ, ಆದರೆ ಪ್ರತಿವಾದಿ 1 ಮತ್ತು 2 ರವರು ಮದುವೆಯಾದ ಬಗ್ಗೆ ನನ್ನ ತಂದೆ ಹೇಳಿರುವುದರಿಂದ ಗೊತ್ತಿರುವುದು. ಈ ಸಂಗತಿ ನನಗೆ ಪ್ರತಿವಾದಿ 2 ರವರು ಹೇಳುವಂತೆ ಹೇಳಿರುವರು ಎಂದರೆ ಸರಿಯಲ್ಲ. ಆದರೆ ನನ್ನ ತಂದೆ ಹೇಳಿರುವುದರಿಂದ ನನಗೆ ಗೊತ್ತಿರುವುದು. ನನಗೂ ಮತ್ತು ಪ್ರತಿವಾದಿ 1 ರಿಂದ 3 ರವರಿಗೆ ಬಹಳ ಪರಿಚಯ ಇರುವುದರಿಂದ, ಇವರ ಬಗ್ಗೆ ನನ್ನ ತಂದೆ ನನಗೆ ಹೇಳಿರುವರು. ಇದರ ಬಗ್ಗೆ ನನ್ನ ಸ್ವಂತಕ್ಕೆ ಗೊತ್ತಿರುವುದಿಲ್ಲ, ನನ್ನ ತಂದೆ ಹೇಳಿರುವುದರಿಂದ ಹೇಳುತ್ತಿದ್ದೇನೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಖಂಡಿಕೆ 3 ರಲ್ಲಿ ಹೇಳಿರುವಂತೆ ಪ್ರತಿವಾದಿ 1 ಮತ್ತು 2 ರವರ ವಿವಾಹ ಗೋಕಾಕ ತಾಕೂಕಿನ ಕಳ್ಳಿಗುದ್ದಿ ಗ್ರಾಮದಲ್ಲಿ ಆದ ವಿವಾಹದ ಬಗ್ಗೆ ನನ್ನ ತಂದೆ ನನಗೆ ಹೇಳಿರುವರು. ನನ್ನ ಸ್ವಂತಕ್ಕೆ ಮಾಹಿತಿ ಇರುವುದಿಲ್ಲ.

5. ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ಯಾವ ಯಾವ ದಾಖಲೆಗಳು ಆಗಿರುವವು ಎಂದು ನನಗೆ ಮಾಹಿತಿ ಇರುವುದಿಲ್ಲ, ಆದರೆ ದಾವಾ ಆಸ್ತಿಗಳು ಪ್ರತಿವಾದಿ 1 ಎಿನ ಆಸ್ತಿ ಎಂದು ನನಗೆ ಮಾಹಿತಿ ಇರುವುದು. ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಬರೆಸಿ

ಹಾಕಲು ಪ್ರತಿವಾದಿ 2 ರವರು ಮಾಹಿತಿ ನೀಡಿರುವರು ಎಂದರೆ ಸರಿ . ಈ ದಾವೆಯ ಬಗ್ಗೆ ನನಗೆ ಸ್ವಂತಕ್ಕೆ ಮಾಹಿತಿ ಇರುವುದಿಲ್ಲ, ನಾನು ಪ್ರತಿವಾದಿ 2 ವಿನ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ 4 ರವರು ಮೃತ ಪ್ರತಿವಾದಿ 1 ವಿನ ಹೆಂಡತಿ, ಇವರ ವೈವಾಹಿಕ ಜೀವನದಿಂದ ವಾದಿ 1 ಹಾಗೂ ಮೃತ ಹೊಳೆಯಪ್ಪ ಜನ್ಮ ತಾಳಿದ್ದರೂ ಸಹಿತ ನಾನು ಉದ್ದೇಶಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಪ್ರತಿವಾದಿ 2 ವಿನ ಜೊತೆ ಹೆಚ್ಚಿನ ಸಂಪರ್ಕ ಹೊಂದಿದ್ದನು ಎಂದರೆ ಸರಿ. ಈ ಒಂದು ಕಾರಣಕ್ಕೆ ನಾನು ಪ್ರತಿವಾದಿಯರ ಮಾತುಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 2 ರವರು ಮೃತ ಪ್ರತಿವಾದಿ 1 ವಿನ ಹೆಂಡತಿಯಾಗಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

VIJAYAKUMAR KANNUR

Digitally signed by VIJAYAKUMAR KANNUR
Date: 2025.09.06 17:41:59 +0530

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ